# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 248 |
| ಸದಸ್ಯರ ಹೆಸರು | : | ಡಾ|| ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 14.09.2021 |
| ಉತ್ತರಿಸುವವರು | : | ಗಣಿ ಮತ್ತು ಭೂವಿಜ್ಞಾನ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರ್ಗಿ ಜಿಲ್ಲೆ ಸೇಡಂ ಪಟ್ಟಣದಲ್ಲಿರುವ ವಾಸವದತ್ತಾ ಸಿಮೆಂಟ್ ಕಂಪನಿ ಕೈಗೊಳ್ಳುವ ಬ್ಲಾಸ್ಟಿಂಗ್ ನಿಂದ ಪಕ್ಕದ ಇಂಜಿಪಲ್ಲಿ ಗ್ರಾಮದ ಮನೆಗಳು ಬಿರುಕು ಬಿಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಹೌದು. |
| ಆ) | ಜೀವ ಭಯದಿಂದ ದಿನ ಕಳೆಯುತ್ತಿರುವ ಗ್ರಾಮದ ಜನರುಗಳಿಗೆ ಪುನರ್ ವಸತಿ ಕ್ರಮ ಕೈಗೊಳ್ಳಲು ವಾಸವದತ್ತಾ ಸಿಮೆಂಟ್ ಕಂಪನಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆಯೇ; | ಹೌದು. |
| ಇ) | ಮಾನ್ಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಇಂಜಿಪಲ್ಲಿ ಗ್ರಾಮದ ನಿವಾಸಿಗಳಿಗೆ ಪುನರ್ ವಸತಿ ಕ್ರಮ ಕೈಗೊಳ್ಳಬೇಕೆಂದು ಕಂಪನಿಯ ಪ್ರತಿನಿಧಿಯೊಂದಿಗೆ ಸಭೆ ನಡೆಸಿ, ನಿರ್ಣಯ ಕೈಗೊಂಡರೂ ಇನ್ನು ಜಾರಿಗೊಳಿಸದಿರಲು ಕಾರಣಗಳೇನು? | 2006 ರಲ್ಲಿ ಪರಿಸರ ತೀರುವಳಿ ಪತ್ರಕ್ಕಾಗಿ ನಡೆದ ಸಾರ್ವಜನಿಕ ವಿಚಾರಣೆ ಸಭೆಯಲ್ಲಿ ತೀರ್ಮಾನಿಸಿರುವಂತೆ, ಸ್ಥಳೀಯರ ಪುನರ್ ವಸತಿಗಾಗಿ 6.23 ಎಕರೆ ಜಮೀನು ಖರೀದಿಸಲಾಗಿದೆ. ಆದರೆ ಗ್ರಾಮಸ್ಥರು ಸದರಿ ಪ್ರದೇಶಕ್ಕೆ ತೆರಳಲು ಇಚ್ಛಿಸದ ಕಾರಣ ಈ ಜಮೀನನ್ನು ಸರ್ಕಾರಕ್ಕೆ ವಹಿಸಿ ಪ್ರವಾಹ ಪೀಡಿತರ ವಸತಿಗಾಗಿ ಮತ್ತು ಸ್ಮಶಾನಕ್ಕಾಗಿ ಬಳಸಲು ಕಂಪನಿಯು ಬಿಟ್ಟುಕೊಟ್ಟಿರುತ್ತದೆ.<br>ತದನಂತರ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ತೀರ್ಮಾನದಂತೆ 2007-08ನೇ ಸಾಲಿನಲ್ಲಿ ವಾಸವದತ್ತಾ ಸಿಮೆಂಟ್ ಕಂಪನಿಯವರು ಇಂಜಿಪಲ್ಲಿ ಗ್ರಾಮದ 51 ಕುಟುಂಬಗಳಿಗೆ, ಅವರ ಸ್ವ-ಇಚ್ಛೆಯಂತೆ ನಗದು ರೂಪದಲ್ಲಿ ಪೂರ್ಣ ಪ್ರಮಾಣದ ಪರಿಹಾರವನ್ನು ಪಾವತಿಸಿರುತ್ತಾರೆ.<br>ಬಾಕಿ ಉಳಿದ 81 ಕುಟುಂಬಗಳಿಗೆ ಪುನರ್ ವಸತಿ ಕಲ್ಪಿಸುವ ಸಂಬಂಧ ಕಂಪನಿಯು 5.21 ಎಕರೆ ಜಮೀನನ್ನು ಖರೀದಿಸಿದ್ದು, ಪುನರ್ ವಸತಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. |

ಸಂಖ್ಯೆ: ಸಿಐ 89 ಸಿಎಂಸಿ 2021

Halappa BA

(ಆಚಾರ್ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂವಿಜ್ಞಾನ ಮತ್ತು ಮಹಿಳಾ
ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು